
ಕರ್ನಾಟಕ ಸರ್ಕಾರ

# ಬಾಲ್ಯವಿವಾಹವನ್ನು ತಡೆಯೋಣ
# ನೆರೆಹೊರೆಯವರು ಏನು ಮಾಡಬೇಕು?

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

**ಬಾಲ್ಯವಿವಾಹ ನಿಷೇಧ ಕಾಯಿದೆ 2006 ರ ಪ್ರಕಾರ 18 ವರ್ಷಕ್ಕಿಂತ ಮುಂಚೆ ಹುಡುಗಿಯ ಮತ್ತು 21 ವರ್ಷಕ್ಕಿಂತ ಮುಂಚೆ ಹುಡುಗನ ಮದುವೆಯನ್ನು ಮಾಡುವುದು ಶಿಕ್ಷಾರ್ಹ ಅಪರಾಧ**



- ತಂದೆ ತಾಯಿ, ಬಂಧುಬಾಂಧವರು ಮತ್ತು ಸಮುದಾಯದವರ ಜೊತೆ ಮಾತನಾಡಿ, ಮುದ್ದು ಮಗಳ ಮದುವೆಯನ್ನು ಮುಂದಕ್ಕೆ ಹಾಕುವಂತೆ ಪ್ರೇರೇಪಿಸಿ.
- ಹುಡುಗಿಯ ಜೊತೆ ಮಾತನಾಡಿ ಈಗಲೇ ಮದುವೆ ಮಾಡಿಕೊಳ್ಳದೇ ಇರುವುದು ಅವಳ ಹಕ್ಕು ಎಂಬುದನ್ನು ಅರ್ಥ ಮಾಡಿಸಿ. ಮದುವೆಗೆ ಒಪ್ಪದಿರಲು ಪ್ರೇರೇಪಿಸಿ, ಬೆಂಬಲಿಸಿ. ನಿಮ್ಮ ಈ ಉಪಕಾರವನ್ನು ಆ ಹುಡುಗಿ ಕೊನೆಯವರೆಗೂ ಮರೆಯುವುದಿಲ್ಲ.





ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:
ಜಿಲ್ಲಾ ಮಟ್ಟದಲ್ಲಿ–ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ತಾಲೂಕು ಮಟ್ಟದಲ್ಲಿ–ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ದೂರವಾಣಿ ಸಂಖ್ಯೆ: 080–22355984, ಮಕ್ಕಳ ಸಹಾಯವಾಣಿ: 1098

ಪ್ರಕಟಣೆ: ಬಾಲ್ಯವಿವಾಹ ನಿಷೇಧ ಕೋಶ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು


ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

# ಬಾಲ್ಯವಿವಾಹವನ್ನು ತಡೆಗಟ್ಟುವುದು ಶಿಕ್ಷಕರು ಏನು ಮಾಡಬೇಕು?

**ಬಾಲ್ಯವಿವಾಹ ನಿಷೇಧ ಕಾಯಿದೆ 2006 ರ ಪ್ರಕಾರ 18 ವರ್ಷಕ್ಕಿಂತ ಮುಂಚೆ ಹುಡುಗಿಯ ಮತ್ತು 21 ವರ್ಷಕ್ಕಿಂತ ಮುಂಚೆ ಹುಡುಗನ ಮದುವೆಯನ್ನು ಮಾಡುವುದು ಶಿಕ್ಷಾರ್ಹ ಅಪರಾಧ**



- ಹೆಣ್ಣು ಮಗು ಹೆಚ್ಚು ದಿನ ಶಾಲೆಗೆ ಬಾರದೇ ಇದ್ದರೆ, ಅವಳ ಮನೆಗೆ ಹೋಗಿ ತಂದೆ ತಾಯಿಯೊಂದಿಗೆ ಮಾತನಾಡಿ.
- ಮಗುವಿನ ಮದುವೆಯ ವಿಚಾರ ನಡೆದಿದ್ದರೆ ಅದನ್ನು ತಡೆಗಟ್ಟಿ. ಮುದ್ದು ಮಗಳ ಭವಿಷ್ಯದ ಬಗ್ಗೆ ತಂದೆತಾಯಿಯರಲ್ಲಿ ವಿಶ್ವಾಸವನ್ನು ಮೂಡಿಸಿ.




- ಬೇಗ ಮಗಳ ಮದುವೆ ಮಾಡುವುದರಿಂದ ಅವಳ ದೇಹ, ಮನಸ್ಸು, ಮುಂದಿನ ಬದುಕು ಇವುಗಳ ಮೇಲೆ ಆಗುವ ಕೆಟ್ಟ ಪರಿಣಾ-ಮಗಳನ್ನು ಅವರಿಗೆ ವಿವರಿಸಿ.
- ಸತತ ಗೈರು ಹಾಜರಿಯ ಮತ್ತು ಕಾಣೆಯಾದ ಮಕ್ಕಳ ಬಗ್ಗೆ ನಿಗಾವಹಿಸಿ.




- ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡುವುದು ನಿಮ್ಮ ಕರ್ತವ್ಯ.
- ನಿಮ್ಮ ವಿದ್ಯಾರ್ಥಿನಿಯ ಬಾಲ್ಯವಿವಾಹವನ್ನು ಮಾಡಿ ಅವಳ ಭವಿಷ್ಯವನ್ನು ಮೊಟಕುಗೊಳಿ-ಸುವವರಿಗೆ ಶಿಕ್ಷೆ ಕೊಡಿಸುವುದೂ ನಿಮ್ಮ ಕರ್ತವ್ಯ.
- ಬಾಲ್ಯವಿವಾಹದ ವಿರುದ್ಧ ಪೊಲೀಸರಿಗೆ, ಮಕ್ಕಳ ಕಲ್ಯಾಣ ಸಮಿತಿಗೆ, ಮಕ್ಕಳ ಸಹಾಯವಾಣಿ–1098ಕ್ಕೆ ದೂರು ಕೊಡಿ.




ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:
ಜಿಲ್ಲಾ ಮಟ್ಟದಲ್ಲಿ–ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ತಾಲೂಕು ಮಟ್ಟದಲ್ಲಿ–ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ದೂರವಾಣಿ ಸಂಖ್ಯೆ: 080–22355984, ಮಕ್ಕಳ ಸಹಾಯವಾಣಿ: 1098

ಪ್ರಕಟಣೆ: ಬಾಲ್ಯವಿವಾಹ ನಿಷೇಧ ಕೋಶ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು

# ಬಾಲ್ಯವಿವಾಹವನ್ನು ತಡೆಗಟ್ಟೋಣ ಪಂಚಾಯತಿಗಳು ಏನು ಮಾಡಬೇಕು?

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

**ಬಾಲ್ಯವಿವಾಹ ನಿಷೇಧ ಕಾಯಿದೆ 2006 ರ ಪ್ರಕಾರ 18 ವರ್ಷಕ್ಕಿಂತ ಮುಂಚೆ ಹುಡುಗಿಯ ಮತ್ತು 21 ವರ್ಷಕ್ಕಿಂತ ಮುಂಚೆ ಹುಡುಗನ ಮದುವೆಯನ್ನು ಮಾಡುವುದು ಶಿಕ್ಷಾರ್ಹ ಅಪರಾಧ**


ಪಂಚಾಯತಿಯ ಸದಸ್ಯರಲ್ಲಿ ಯಾರೂ ನಿಮ್ಮ ಮಕ್ಕಳ ಬಾಲ್ಯವಿವಾಹವನ್ನು ಮಾಡಬೇಡಿ. ನಿಮ್ಮ ಊರಿನಲ್ಲಿ ಬಾಲ್ಯವಿವಾಹವನ್ನು ವಿರೋಧಿಸಿ, ನಿಷೇಧಿಸಿ. ಬಾಲ್ಯವಿವಾಹ ಅಪರಾಧ.



ಬಾಲ್ಯವಿವಾಹದ ಕೆಟ್ಟ ಪರಿಣಾಮಗಳ ಕುರಿತು ಸಮುದಾಯದಲ್ಲಿ ಅರಿವನ್ನು ಮೂಡಿಸಿ. 18 ವರ್ಷಕ್ಕಿಂತ ಮುಂಚೆ ಮಗಳ ಮದುವೆಯನ್ನು ಮಾಡ ಹೊರಟಿರುವ ತಂದೆತಾಯಂದಿರ ಜೊತೆ ಮಾತಾಡಿ, ಅವರಿಗೆ ತೊಂದರೆಗಳಿದ್ದರೆ ನಿವಾರಿಸಿ, ಧೈರ್ಯ ನೀಡಿ, ಬೆಂಬಲ ಕೊಡಿ.




ನಿಮ್ಮ ಗ್ರಾಮ ಪಂಚಾಯತಿಯಲ್ಲಿ ಒಂದು ಮಕ್ಕಳ ರಕ್ಷಣಾ ಸಮಿತಿಯನ್ನು ರಚಿಸಿಕೊಳ್ಳಿ. ಮಕ್ಕಳ ಇತರ ಸಮಸ್ಯೆಗಳ ಜೊತೆಯಲ್ಲಿ ಬಾಲ್ಯವಿವಾಹಗಳು ನಿಮ್ಮ ಗ್ರಾಮದಲ್ಲಿ ನಡೆಯದ ಹಾಗೆ ನಿಗಾವಹಿಸಿರಿ. ಕಾಣೆಯಾದ ಮಕ್ಕಳ ಬಗ್ಗೆ ನಿಗಾವಹಿಸಿರಿ.




ಶಾಲೆಗಳಲ್ಲಿ ಹುಡುಗಿಯರ ಶಿಕ್ಷಣಕ್ಕೆ ಮನ್ನಣೆ ನೀಡಿ, ಅನುಕೂಲ ಒದಗಿಸಿ. ಅವರು ಶಾಲೆಗೆ ಗೈರು ಹಾಜರಾಗದಂತೆ ನಿಗಾವಹಿಸಿ. ನಿಮ್ಮ ಗ್ರಾಮದ ಹುಡುಗಿಯರು ಉನ್ನತ ಶಿಕ್ಷಣ ಹೊಂದಿ ಉತ್ತಮ ಬದುಕನ್ನು ನಡೆಸಿದರೆ ನಿಮ್ಮ ಪಂಚಾಯತಿಗೇ ಕೀರ್ತಿ.




ಸಕಾಲದಲ್ಲಿ ಮಾಹಿತಿಯನ್ನು ನೀಡುವ ಮೂಲಕ ಬಾಲ್ಯವಿವಾಹ ನಿಷೇಧ ಅಧಿಕಾರಿ ಮತ್ತು ಪೋಲೀಸರೊಂದಿಗೆ ಸಹಕರಿಸಿ.






ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:
ಜಿಲ್ಲಾ ಮಟ್ಟದಲ್ಲಿ–ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ತಾಲೂಕು ಮಟ್ಟದಲ್ಲಿ–ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ದೂರವಾಣಿ ಸಂಖ್ಯೆ: 080–22355984, ಮಕ್ಕಳ ಸಹಾಯವಾಣಿ: 1098

ಪ್ರಕಟಣೆ: ಬಾಲ್ಯವಿವಾಹ ನಿಷೇಧ ಕೋಶ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು

# ಬಾಲ್ಯವಿವಾಹವನ್ನು ತಡೆಗಟ್ಟೋಣ ತಂದೆತಾಯಿಯರು ಏನು ಮಾಡಬೇಕು?

**ಬಾಲ್ಯವಿವಾಹ ನಿಷೇಧ ಕಾಯಿದೆ 2006 ರ ಪ್ರಕಾರ 18 ವರ್ಷಕ್ಕಿಂತ ಮುಂಚೆ ಹುಡುಗಿಯ ಮತ್ತು 21 ವರ್ಷಕ್ಕಿಂತ ಮುಂಚೆ ಹುಡುಗನ ಮದುವೆಯನ್ನು ಮಾಡುವುದು ಶಿಕ್ಷಾರ್ಹ ಅಪರಾಧ**



## ಬಾಲ್ಯವಿವಾಹದಿಂದಾಗುವ ದುಷ್ಪರಿಣಾಮಗಳು:

- 18 ವರ್ಷಕ್ಕಿಂತ ಮುಂಚೆ ಆದ ಮದುವೆ ಕಾನೂನು ಪ್ರಕಾರ ಒಂದು ಅಪರಾಧ
- ಮಗಳ ಒಪ್ಪಿಗೆಯಿಲ್ಲದೇ ಮಾಡಿದ ಮದುವೆ ಅಮಾನವೀಯ
- ಮಗುವಿನ ಮದುವೆ ಮಾನವ ಹಕ್ಕು ಉಲ್ಲಂಘನೆ
- ಬಾಲ್ಯವನ್ನು ಸವಿಯುವ ಮುಂಚೆ, ಬಲವಂತದ ಮದುವೆ, ಬೆಳವಣಿಗೆಯಿಂದ ವಂಚನೆ
- ಮುದ್ದು ಮಗಳನ್ನು ಅನಾರೋಗ್ಯ, ದೌರ್ಜನ್ಯ ಸಾವಿನ ಕೂಪಕ್ಕೆ ತಳ್ಳಿದ ಪಾಪ
- ಎಳೆಯ ಹುಡುಗಿ ಗರ್ಭಿಣಿಯಾದರೆ ತಾಯಿ ಮತ್ತು ಮಗು ಇಬ್ಬರ ಜೀವಕ್ಕೂ ಅಪಾಯ
- ಹುಟ್ಟುವ ಮಗು ದುರ್ಬಲವಾಗಿರುತ್ತದೆ, ತಾಯಿಯ ಆರೋಗ್ಯವೂ ಕೆಡುತ್ತೆ



## ನಿಮ್ಮ ಮುದ್ದಿನ ಮಗಳ ಬದುಕು ಚೆನ್ನಾಗಿರಲು ಏನು ಮಾಡಬೇಕು:

- ಮಗಳ ಮದುವೆ ಬೇಗ ಮಾಡದೇ ಇದ್ದರೆ ಅವಳು ಓದಿ ಬುದ್ಧಿವಂತೆ ಆಗುತ್ತಾಳೆ ನೌಕರಿ ಮಾಡಿ ದುಡಿಯುತ್ತಾಳೆ, ಇರುವ ಮನೆಗೆ, ಮುಂದೆ ಹೋಗುವ ಮನೆಗೆ ಸಂಪತ್ತು ತರುತ್ತಾಳೆ.
- 18 ದಾಟಿದ ನಂತರ ಮದುವೆ ಆದರೆ, ಹುಟ್ಟುವ ಮಕ್ಕಳೂ ಚೆನ್ನಾಗಿರುತ್ತವೆ. ಎರಡು ಮನೆಗಳನ್ನು ಬೆಳಗುವ ದೀಪ ನಿಮ್ಮ ಮಗಳು, ಅವಳ ಸುಂದರ ಭವಿಷ್ಯವನ್ನು ಕಟ್ಟುವವರು ನೀವೇ ಅಲ್ಲವೇ? ಆದ್ದರಿಂದ 18 ವರ್ಷಕ್ಕಿಂತ ಮುಂಚೆ ಮದುವೆ ಮಾಡಬೇಡಿ.

## ಆಯ್ಕೆ ನಿಮ್ಮದು,

ಮಗಳ ಮದುವೆಯನ್ನು 18 ವರ್ಷಕ್ಕಿಂತ ಮುಂಚೆ ಮಾಡಿ
ಅವಳ ಬದುಕಿನಲ್ಲಿ ಕತ್ತಲೆಯನ್ನು ತರುತ್ತೀರಾ?
ಮದುವೆಯನ್ನು ತಡಮಾಡಿ, ಅವಳಿಗೆ ಶಿಕ್ಷಣ,
ದುಡಿಯುವ ಸಾಮರ್ಥ್ಯ ಕೊಟ್ಟು ಅವಳ ಬದುಕನ್ನು ಬೆಳಗಿಸಿರಿ.




ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:
ಜಿಲ್ಲಾ ಮಟ್ಟದಲ್ಲಿ–ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ತಾಲೂಕು ಮಟ್ಟದಲ್ಲಿ–ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ದೂರವಾಣಿ ಸಂಖ್ಯೆ: 080–22355984, ಮಕ್ಕಳ ಸಹಾಯವಾಣಿ: 1098

ಪ್ರಕಟಣೆ: ಬಾಲ್ಯವಿವಾಹ ನಿಷೇಧ ಕೋಶ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು

ಕರ್ನಾಟಕ ಸರ್ಕಾರ


# ಬಾಲ್ಯವಿವಾಹವನ್ನು ತಡೆಗಟ್ಟೋಣ
# ಪೊಲೀಸರು ಏನು ಮಾಡಬೇಕು?

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

**ಬಾಲ್ಯವಿವಾಹ ನಿಷೇಧ ಕಾಯಿದೆ 2006 ರ ಪ್ರಕಾರ 18 ವರ್ಷಕ್ಕಿಂತ ಮುಂಚೆ ಹುಡುಗಿಯ ಮತ್ತು 21 ವರ್ಷಕ್ಕಿಂತ ಮುಂಚೆ ಹುಡುಗನ ಮದುವೆಯನ್ನು ಮಾಡುವುದು ಶಿಕ್ಷಾರ್ಹ ಅಪರಾಧ**



ಬಾಲ್ಯವಿವಾಹದ ವಿರುದ್ಧ ಬರುವ ದೂರುಗಳನ್ನು ತಕ್ಷಣ ಗಮನಕ್ಕೆ ತೆಗೆದುಕೊಳ್ಳಿ. ಶೀಘ್ರ ಕ್ರಮ ತೆಗೆದುಕೊಳ್ಳಿ. ಅದರಿಂದ ಒಂದು ಹೆಣ್ಣು ಮಗುವಿನ ಭವಿಷ್ಯವು ಹಾಳಾಗದಂತೆ ಕಾಪಾಡಿದ ಹೆಮ್ಮೆ ನಿಮ್ಮದಾಗುತ್ತದೆ.



ಬಾಲ್ಯವಿವಾಹದ ಕುರಿತು ನಿಮಗೆ ದೊರೆತ ಮಾಹಿತಿಯನ್ನು ತಡಮಾಡದೇ ಬಾಲ್ಯವಿವಾಹ ನಿಷೇಧ ಅಧಿಕಾರಿಗೆ ಮತ್ತು ಜಿಲ್ಲಾಧಿಕಾರಿಗೆ ತಿಳಿಸಿ.




ಬಾಲ್ಯವಿವಾಹ ನಡೆಯುತ್ತಿರುವ ಸ್ಥಳಕ್ಕೆ ಕೂಡಲೇ ಧಾವಿಸಿ. ಮದುವೆ ನಡೆಯುವ ಮುನ್ನ ಅದನ್ನು ತಡೆಗಟ್ಟಿ. ಸಂಬಂಧ ಪಟ್ಟವರಲ್ಲಿ ಕಾನೂನಿನ ಅರಿವನ್ನು ಮೂಡಿಸಿ.




ಬಾಲ್ಯವಿವಾಹ ಶಿಕ್ಷಾರ್ಹ ಮತ್ತು ಜಾಮೀನುರಹಿತವಾದ ಅಪರಾಧ. ಇದರಲ್ಲಿ ಕೈಜೋಡಿಸಿದ ಎಲ್ಲ ವಯಸ್ಕರನ್ನು ಬಂಧಿಸಿ, ಕ್ರಮ ತೆಗೆದುಕೊಳ್ಳಿ.



ಬಾಲ್ಯವಿವಾಹಕ್ಕೆ ಒಳಗಾಗುತ್ತಿರುವ ಮಕ್ಕಳನ್ನು ರಕ್ಷಿಸಿ, ಅವರನ್ನು ಬಂಧಿಸಬೇಡಿ, ಕೈಗೆ ಕೋಳ ತೊಡಿಸಬೇಡಿ. ಅವರು ಅಪರಾಧಿಗಳಲ್ಲ, ಬಲಿಪಶುಗಳು.




ಬಾಲ್ಯವಿವಾಹದ ದೌರ್ಜನ್ಯದಿಂದ ರಕ್ಷಿಸಲಾದ ಮಗುವನ್ನು 24 ಗಂಟೆಯೊಳಗಾಗಿ ಮಕ್ಕಳ ಕಲ್ಯಾಣ ಸಮಿತಿ ಅಥವಾ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯ ಎದುರು ಹಾಜರು ಪಡಿಸಿ.




ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:
ಜಿಲ್ಲಾ ಮಟ್ಟದಲ್ಲಿ–ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ತಾಲೂಕು ಮಟ್ಟದಲ್ಲಿ–ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ದೂರವಾಣಿ ಸಂಖ್ಯೆ: 080–22355984, ಮಕ್ಕಳ ಸಹಾಯವಾಣಿ: 1098

ಪ್ರಕಟಣೆ: ಬಾಲ್ಯವಿವಾಹ ನಿಷೇಧ ಕೋಶ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು